ಖ) ಬೈಲಹೊಂಗಲ ತಾಲ್ಲೂಕಿನ ಗೋವಕೊಪ್ಪ ಗ್ರಾಮದ ನೀರು ಸರಬರಾಜು ಯೋಜನೆ

ಶ್ರೀ ಶಿವಾನಂದ ಎಚ್. ಕೌಜಲಗಿ.—ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ಗೋವಕೊಪ್ಪ ಗ್ರಾಮದಲ್ಲಿ ಬಹಳ ವರ್ಷಗಳ ಹಿಂದೆ ಪೈಪ್ಡ್ ವಾಟರ್ಸಿಸ್ಟೀಂ ಮಂಜೂರು ಮಾಡಿರುತ್ತಾರೆ. ಆ ಕಾಲಕ್ಕೆ ಗೆನೆಲೈಜ್ ಪೈಪ್ (ಕಬ್ಬಿಣದ ಪೈಪು) ಹಾಕಿರುತ್ತಾರೆ. ಈ ಗೆನೆಲೈಜ್ ಪೈಪು ತುಕ್ಕು ಹಿಡಿದು ಹಾಳಾಗಿರುತ್ತದೆ. ಇದರಿಂದ ಬರುವ ತುಕ್ಕು ಹಿಡಿದ ನೀರನ್ನು ಆ ಗ್ರಾಮದ ಜನರು ಕುಡಿಯುತ್ತಿದ್ದು ಇದರಿಂದ ಅಲ್ಲಿಯ ಜನರ ಆರೋಗ್ಯ ಕೆಟ್ಟಿರುತ್ತದೆ. ಈ ಬಗ್ಗೆ ಜಿಲ್ಲಾ ಪರಿಷತ್ ಇಂಜಿನೀಯರಿಂಗ್ ವಿಭಾಗವನ್ನು ತುಕ್ಕು ಹಿಡಿದಿರುವ ಈ ಪೈಪುಗಳನ್ನು ಬದಲಾಯಿಸಿ ಪ್ಲಾಸ್ಟಿಕ್ ಪೈಪುಗಳನ್ನು ಹಾಕಬೇಕೆಂದು ಕೇಳಿದರೆ ಈ ಕೆಲಸವನ್ನು ಮಂಡಲ್ ಪಂಚಾಯಿತಿಯವರು ಅವರ ಹಣದಿಂದ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಇಷ್ಟೊಂದು ಹಣವನ್ನು ವೆಚ್ಚ ಮಾಡಲು ಮಂಡಲ ಪಂಚಾಯಿತಿಯಲ್ಲಿ ಹಣವಿರುವುದಿಲ್ಲ. ಅದೂ ಅಲ್ಲದೆ ಕಟ್ಟಿರುವ ಟ್ಯಾಂಕ್ ಬಹಳ ಸಣ್ಣ ದಾಗಿದ್ದು ಬಡಾವಣೆಯು ಎಲ್ಲಾ ಪ್ರದೇಶಗಳಿಗೂ ನೀರಿನ ಸೌಕರ್ಯವೂ ಸಹ ಇರುವುದಿಲ್ಲ. ಆದ್ದರಿಂದ ದಯವಿಟ್ಟು ಈ ಕೆಲಸವನ್ನು ಆಗು ಮೆಂಟೇಶನ್ ಸ್ಕೀಮಿನಲ್ಲಿ ತೆಗೆದುಕೊಂಡು ಪೂರೈಸಬೇಕೆಂದು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪುತ್ತೇನೆ. ಆಗು ಮೆಂಟೇಶನ್ ಪ್ರೋಗ್ರಾಂ ಪ್ರಕಾರ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೦ನೇ ಇಸವಿಯ ಭೂ ಕಂದಾಯ (ತಿದ್ದುಪಡಿ) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) —ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷೆಯವರು.—ಪ್ರಸ್ತಾವ ಏನೆಂದರೆ "೧೯೯೦ನೇ ಇಸವಿಯ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಮಾನ್ಯ ಅಧ್ಯಕ್ಷರೆ, ೧೯೯೦ನೇ ಇಸವಿಯ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷೆಯವರು.—*ವಿಧೇಯಕವನ್ನು ಮಂಡಿಸಲಾಗಿದೆ.*

೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ ಕರ್ನಾಟಕ (ತಿದ್ದುಪಡಿ) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಬಿ. ಶಿವಣ್ಣ (ಕಾನೂನು ಹಾಗೂ ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷೆಯವರು.—ಪ್ರಸ್ತಾವ ಏನೆಂದರೆ, ೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.